ಕೋರುತ್ತೇನೆ.

ಅಧ್ಯಕ್ಷರು: ಪ್ರಸ್ತಾವ ಏನೆಂದರೆ, '1997ರ ಕರ್ನಾಟಕ ಸಚಿವರ ವೇತನಗಳು ಮತ್ತು ಭತ್ಯೆಗಳ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

(ಇ) ಕರ್ನಾಟಕ ವಿಧಾನ ಮಂಡಲದವರ ವೇತನಗಳ, ನಿವೃತ್ತಿ ವೇತನ ಮತ್ತು ಭತ್ಯೆಗಳ (ತಿದ್ದುಪಡಿ) ವಿಧೇಯಕ, 1997

ಶ್ರೀ ಎಂ.ಸಿ.ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಮತ್ತು ವಾರ್ತಾ ಸಚಿವರು): ಮಾನ್ಯ ಅಧ್ಯಕ್ಷರೇ, 1997ನೇ ಸಾಲಿನ ಕರ್ನಾಟಕ ವಿಧಾನ ಮಂಡಲದವರ ವೇತನಗಳ, ನಿವೃತ್ತಿ ವೇತನ ಮತ್ತು ಭತ್ಯೆಗಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವ ಮಂಡಿಸಲ್ಪಟ್ಟಿತು.

+ ಶ್ರೀ ಎಂ.ಸಿ.ನಾಣಯ್ಯ (ಕಾನೂನು ಸಚಿವರು): ಅಧ್ಯಕ್ಷರೇ ಎಲ್ಲಾ ಶಾಸಕರಿಗೂ, ಹಾಗೂ ಎಲ್ಲಾ ಮಂತ್ರಿಗಳಿಗೂ ಸೇರಿ ನಾವು ಒಟ್ಟಾಗಿ ಮಾಡಬೇಕೆಂದು ತೀರ್ಮಾನ ಮಾಡಿದ್ದೇವೆ. ಇದು ಸ್ವಲ್ಪ ಮಟ್ಟಿಗೆ ಹೆಚ್ಚಿಗೆ ಮಾಡಲೇಬೇಕಾಗಿತ್ತು. ಏಕೆಂದರೆ 1994ರಲ್ಲಿ ನಾವು ಇದನ್ನು ಮಾಡಿದಾದ ಮೇಲೆ 1997 ಇಲ್ಲಿಯವರೆಗೆ ಎಲ್ಲವೂ ಕೂಡ ಬಹಳಷ್ಟು ಬೆಲೆಗಳು ಏರಿವೆ. ಇವತ್ತು ಪ್ರತಿ ಶಾಸಕರು ತಮ್ಮ ತಮ್ಮ ಕ್ಷೇತ್ರದಲ್ಲಿ ಪ್ರಾಮಾಣಿಕವಾಗಿ ಕೆಲಸ ಮಾಡಬೇಕಾದರೆ, ಪ್ರಸ್ತುತ ಇರತಕ್ಕಂಥ ವೇತನ ಹಾಗೂ ಭತ್ಯೆಗಳು ಸಾಕಾಗುವುದಿಲ್ಲ. ಜೇಬಿನಿಂದ ಖರ್ಚು ಮಾಡಿಕೊಂಡು ಕೆಲಸ ಮಾಡತಕ್ಕಂಥ ಆ ಒಂದು ಪರಿಸ್ಥಿತಿ ಇವತ್ತು ಶಾಸಕರಿಗೆ ಬಂದಿದೆ. ಏಕೆಂದರೆ ದೂರವಾಣಿ ವೆಚ್ಚವೇ ಸುಮಾರು 4000 ರೂ.ಗಳಿಂದ 6000 ರೂ.ವರೆಗೆ ಬರತಕ್ಕಂಥ ಪರಿಸ್ಥಿತಿಯನ್ನೂ ನಾವು ನೋಡಿದ್ದೇವೆ. ಇವತ್ತು ದೂರವಾಣಿ ದರ ಸುಮಾರು ಮೂರು ಪಟ್ಟು, ನಾಲ್ಕು ಪಟ್ಟು ಹೆಚ್ಚಾಗಿದೆ, ಹಾಗೂ ಪೆಟ್ರೋಲ್ ದರ 1994ನೇ ವರ್ಷದಲ್ಲಿ 18 ರೂಪಾಯಿ ಇದ್ದದ್ದು ಈಗ 30 ರೂಪಾಯಿಯಾಗಿದೆ. ಇಂತಹ ಸನ್ನಿವೇಶದಲ್ಲಿ ಶಾಸಕರು ತಮ್ಮ ತಮ್ಮ ಕ್ಷೇತ್ರದಲ್ಲಿ ಕೆಲಸ ಮಾಡತಕ್ಕಂಥದ್ದು, ಹಾಗೂ ಬೆಂಗಳೂರಿಗೆ ಬರತಕ್ಕಂಥದ್ದು, ಜನರ ಕೆಲಸಗಳನ್ನು ಮಾಡತಕ್ಕಂಥದ್ದು, ಹೀಗಾಗಿ ಅವರಿಗೆ ಎಷ್ಟು ವೆಚ್ಚವಾಗುತ್ತದೋ ಅದನ್ನು ನಾವು ಕೊಡದೇ ಹೋದರೆ ಕೆಲಸ ಮಾಡುವುದು ಕಷ್ಟವಾಗುತ್ತದೆ. ಹಾಗೂ ಇದರ ಜೊತೆಗೆ ಪ್ರಾಮಾಣಿಕವಾಗಿ ಯಾರಿಗೂ ಕೆಲಸ ಮಾಡುವುದಕ್ಕಾಗುವುದಿಲ್ಲ. ಕೆಲವು ಸಂದರ್ಭಗಳಲ್ಲಿ ಅಲ್ಲಲ್ಲಿ ಒಂದು ಕೂಗು ಅದೇನೆಂದರೆ ಮಂತ್ರಿಗಳ ಹಾಗೂ ಶಾಸಕರ ಭತ್ಯೆಗಳನ್ನು ಏರಿಸಿದ್ದಾರೆ ಎಂದು ಕೇಳಿ ಬರುತ್ತದೆ. ಸಾರ್ವಜನಿಕರಿಗೆ ಈ ಸಂದರ್ಭದಲ್ಲಿ

ನಾವು ಹೇಳಬೇಕೆಂದರೆ, ನೇರವಾಗಿ ಶಾಸಕರು ತಮ್ಮ ತಮ್ಮ ಕ್ಷೇತ್ರಗಳಲ್ಲಿ ಕೆಲಸ ಮಾಡುವ ಹಿತದೃಷ್ಟಿಯಿಂದ ವೇತನ ಹಾಗೂ ಭತ್ಯೆಗಳನ್ನು ಏರಿಸಲೇಬೇಕಾದ ಅನಿವಾರ್ಯ ಪರಿಸ್ಥಿತಿ ಇದೆ ಎಂದು ನಾವು ಸಾರ್ವಜನಿಕರಿಗೆ ಹೇಳಬೇಕಾಗುತ್ತದೆ. ಇದು ಕೇವಲ ಏಕಪಕ್ಷೀಯ ಅಲ್ಲ, ವಿರೋಧ ಪಕ್ಷದವರು ಹಾಗೂ ಆಡಳಿತ ಪಕ್ಷದವರು ಎಲ್ಲರೂ ಕುಳಿತುಕೊಂಡು ಚರ್ಚೆ ಮಾಡಿ ನಾವು ಈ ಒಂದು ನಿರ್ಧಾರವನ್ನು ಮಾಡಿದ್ದೇವೆ. ಪ್ರತಿಯೊಬ್ಬ ಮಂತ್ರಿ ಹಾಗೂ ಶಾಸಕರು ತಮ್ಮ ಕ್ಷೇತ್ರಗಳಲ್ಲಿ ಚೆನ್ನಾಗಿ ಕೆಲಸ ಮಾಡಬೇಕು ಎನ್ನುವ ಹಿನ್ನೆಲೆಯಲ್ಲಿ ಕನಿಷ್ಠ ಪ್ರಮಾಣ ಎಷ್ಟು ಕೊಡಬೇಕು ಎಂಬುದನ್ನು ಚಿಂತನೆ ಮಾಡಿ ನಾವು ಈ ನಿರ್ಧಾರವನ್ನು ಕೈಗೊಂಡಿದ್ದೇವೆ. ಮಾನ್ಯ ಸಭಾಧ್ಯಕ್ಷರೂ ಕೂಡ ಈ ವಿಷಯದಲ್ಲಿ ತಮ್ಮ ಸಲಹೆಗಳನ್ನು ಕೂಡ ಕೊಟ್ಟಿದ್ದಾರೆ. ಮತ್ತೊಂದು ವಿಷಯ ಏನೆಂದರೆ, ಈ ವಿಷಯವನ್ನು ತೀರ್ಮಾನ ಮಾಡುವುದಕ್ಕಿಂತ ಮುಂಚೆ, ನಮ್ಮ ಬಹಳಷ್ಟು ಜನ ಕೆಳಮನೆ ಹಾಗೂ ಮೇಲ್ಮನೆ ಸದಸ್ಯರೂ ಕೂಡ ಬೇರೆ ರಾಜ್ಯಗಳಲ್ಲಿ ಶಾಸಕರಿಗೂ ಹಾಗೂ ಮಂತ್ರಿಗಳಿಗೆ ಕೊಡುತ್ತಿರುವ ಸಂಬಳ, ಭತ್ಯೆ, ಹಾಗೂ ಸಂಪೂರ್ಣವಾದ ವಿವರಗಳನ್ನು ತಂದಿದ್ದರು. ಆ ವಿವರವನ್ನು ನಾನು ಸಂಪೂರ್ಣವಾಗಿ ನೋಡಿದಾದ ನಂತರ ಬೇರೆ ಒಂದು ಮೂರು ರಾಜ್ಯಗಳಿಗೆ ಸಂಬಂಧಪಟ್ಟ ಹಾಗೆ ಹೋಲಿಸಿ ನೋಡಿದಾಗ ನಾವು ಏರಿಸಿರುವ ವೇತನ ಹಾಗೂ ಭತ್ಯೆದ ಪ್ರಮಾಣ ಕಡಿಮೆ ಇದೆ. ಬೇರೆ ರಾಜ್ಯದವರು ಇನ್ನು ಆ ಪ್ರಮಾಣವನ್ನು ಹೆಚ್ಚು ಮಾಡಿದ್ದಾರೆ. ಶಾಸಕರು ತಮ್ಮ ಕ್ಷೇತ್ರಗಳಿಗೆ ಹೋಗಿ, ಕೆಲಸ ಮಾಡಬೇಕಾಗುತ್ತದೆ, ಹೀಗೆ ಮಾಡುವುದಕ್ಕೆ ಹಣ ಖರ್ಚು ಆಗುತ್ತಿದೆ, ದೂರವಾಣಿ ವೆಚ್ಚ ಕೂಡ ಖರ್ಚಾಗುತ್ತಿದೆ, ಪೆಟ್ರೋಲ್ ಕೂಡ ಖರ್ಚಾಗುತ್ತಿದೆ. ತಮ್ಮ ಸ್ವತಃ ಜೇಬಿನಿಂದ ಖರ್ಚು ಮಾಡತಕ್ಕ ಸಾಮರ್ಥ್ಯ ಬಹಳಷ್ಟು ಶಾಸಕರಿಗೂ ಇಲ್ಲ. ಹಾಗೂ ಜೇಬಿನಿಂದ ಖರ್ಚು ಮಾಡಿ ಕೆಲಸ ಮಾಡುತ್ತೇವೆ ಎನ್ನುವುದು ಬರಬಾರದು ಎನ್ನುವ ಹಿನ್ನೆಲೆಯಲ್ಲಿ ನಾವು ಇದನ್ನು ತಂದಿದ್ದೇವೆ. ನಾವು ಇದನ್ನು ತರುವಾಗ ಎಲ್ಲರೂ ಅಂದರೆ ಮಾನ್ಯ ಖರ್ಗೆಯವರು ಯಡಿಯೂರಪ್ಪನವರು ಹಾಗೂ ನಾನು ಮತ್ತು ಮಾನ್ಯ ಉಪ ಮುಖ್ಯಮಂತ್ರಿಗಳು ಎಲ್ಲರೂ ಸೇರಿ ಇದನ್ನು ತಂದಿದ್ದೇವೆ. ಈ ಸಂದರ್ಭದಲ್ಲಿ ಮಾನ್ಯ ಉಪ ಮುಖ್ಯಮಂತ್ರಿಗಳಿಗೆ ನಾನು ಅರಿಕೆ ಮಾಡಿಕೊಳ್ಳುವುದೇನೆಂದರೆ, ಈ ಕ್ರಮದಿಂದ ಸರ್ಕಾರಕ್ಕೆ ಸ್ವಲ್ಪ ಮಟ್ಟಿಗೆ ಹೊರೆ ಆದರೂ ಕೂಡ ಶಾಸಕರಿಗೆ ಕನಿಷ್ಠ ಪ್ರಮಾಣದ ವೇತನ ಹಾಗೂ ಭತ್ಯೆ ಕೊಡಬೇಕೆಂದು ಅವರನ್ನು ಕೇಳಿಕೊಂಡಾಗ ಅವರು ಕೂಡ ಬಹಳ ಧಾರಾಳ ಮನಸ್ಸಿನಿಂದ ಒಪ್ಪಿದ್ದಾರೆ. ಈ ವಿಷಯವನ್ನು ಮುಖ್ಯಮಂತ್ರಿಗಳ ಗಮನಕ್ಕೆ ತಂದಾಗ ಅವರು ಕೂಡ, ಶಾಸಕರಿಗೆ ಕೊಡಬೇಕಾದುದು ಅಗತ್ಯವಿದೆ ಎಂದು ಅವರು ಒಪ್ಪಿದ್ದಾರೆ. ಆದ್ದರಿಂದ ನಾವು ಈ ವಿಧೇಯಕವನ್ನು ಎಲ್ಲರೂ ಸೇರಿ ತಂದಿರುವುದರಿಂದ,.. ಇದು ಸದನದ ವಿಧೇಯಕ, ಸರ್ಕಾರದ ವತಿಯಿಂದ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರಾಗಿ ಈ ವಿಧೇಯಕವನ್ನು ತಂದಿದ್ದರೂ ಕೂಡ ಇದು ಸದನದ ವಿಧೇಯಕಎಂದು ನಾನು ಈ ಸಂದರ್ಭದಲ್ಲಿ ಹೇಳುತ್ತಾ, ಇದರಲ್ಲಿ ಒಂದು ಟೈಪೋಗ್ರಫಿಕಲ್ ಎರರ್ ಆಗಿದೆ. ಸ್ವಲ್ಪ ಮಟ್ಟಿಗೆ ನಾವು ತೀರ್ಮಾನ ಮಾಡಿದ್ದು

ಎಂದು ಕಾಣುತ್ತದೆ... ಅಮೆಂಡ್‌ಮೆಂಟ್ ಆಫ್ ಸೆಕ್ಷನ್ 2ರಲ್ಲಿ ಅದು ಪುಟ 4 ಕರ್ನಾಟಕ ಲೆಜಿಸ್ಲೇಚರ್ಸ್ ಸ್ಯಾಲರೀಸ್ ಬಿಲ್‌ನಲ್ಲಿ ಒಂದು ಟೈಪಿಂಗ್ ಎರರ್ ಆಗಿದೆ.. In clause (a) for the words Rs. 4.50, the word Rs. 5-00 is stated. It should be read as Rs. 6-00 There is some error. It should be read as Rs. 6/- only. ಆದ್ದರಿಂದ, ಈ ಸದನ ಇದಕ್ಕೆ ಬೇಕಾಗಿರತಕ್ಕ ಸಂಪೂರ್ಣ ಬೆಂಬಲವನ್ನು ಈ ಹಿಂದೆಯೇ ಸೂಚಿಸಿದ್ದಾರೆ. ಆದ್ದರಿಂದ ಇದಕ್ಕೆ ಮಂಜೂರಾತಿಯನ್ನು ಕೊಡಬೇಕಾಗಿ ವಿನಂತಿ.

ಅಧ್ಯಕ್ಷರು: ಪ್ರಸ್ತಾವ ಏನೆಂದರೆ, ''1997ನೇ ಸಾಲಿನ ಕರ್ನಾಟಕ ವಿಧಾನ ಮಂಡಲದವರ ವೇತನಗಳ, ನಿವೃತ್ತಿ ವೇತನ ಮತ್ತು ಭತ್ಯೆಗಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು.

(ಪ್ರಸ್ತಾವ ಅಂಗೀಕರಿಸಲ್ಪಟ್ಟಿತು)

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು.

ಖಂಡ 2 ರಿಂದ 13 ರವರೆಗೆ.

ಅಧ್ಯಕ್ಷರು: ''ಖಂಡ 2 ರಿಂದ 13 ರವರೆಗೆ, ಎರಡು ಸೇರಿದಂತೆ, ಈ ವಿಧೇಯಕದ ಅಂಗವಾಗಿರುತ್ತದೆ.''

(ಪ್ರಸ್ತಾವ ಅಂಗೀಕರಿಸಲ್ಪಟ್ಟಿತು)

(ಖಂಡ 2 ರಿಂದ 13ರವರೆಗೆ, ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)

ಖಂಡ 1 ಇತ್ಯಾದಿ.

ಅಧ್ಯಕ್ಷರು: ಪ್ರಸ್ತಾವ ಏನೆಂದರೆ ''ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ, ವಿಧೇಯಕದ ಭಾಗವಾಗಿರುತ್ತದೆ.''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವ ಅಂಗೀಕಾರ.

ಶ್ರೀ ಎಂ.ಸಿ.ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಅಧ್ಯಕ್ಷರೆ, 1997ರ ಕರ್ನಾಟಕ ವಿಧಾನಮಂಡಲದವರ ವೇತನಗಳ, ನಿವೃತ್ತಿ ವೇತನಗಳ ಮತ್ತು ಭತ್ಯೆಗಳ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೊರುತ್ತೇನೆ.

ಅಧ್ಯಕ್ಷರು: ಪ್ರಸ್ತಾವ ಏನೆಂದರೆ 1997ರ ಕರ್ನಾಟಕ ವಿಧಾನ ಮಂಡಲದವರ ವೇತನಗಳು, ನಿವೃತ್ತಿಗಳ ಮತ್ತು ಭತ್ಯೆಗಳ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

(ಈ) ಕರ್ನಾಟಕ ತೆರಿಗೆ ಕಾನೂನುಗಳ (ಎರಡನೇ ತಿದ್ದುಪಡಿ) ವಿಧೇಯಕ, 1997 ಪರ್ಯಾಲೋಚನಾ ಪ್ರಸ್ತಾವ

+ ಶ್ರೀ ಸಿದ್ಧರಾಮಯ್ಯ (ಉಪಮುಖ್ಯಮಂತ್ರಿಗಳು): ಮಾನ್ಯ ಅಧ್ಯಕ್ಷರೆ, 1997ರ ಕರ್ನಾಟಕ ತೆರಿಗೆ ಕಾನೂನುಗಳ (ಎರಡನೇ ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

ಶ್ರೀ ಸಿದ್ಧರಾಮಯ್ಯ (ಉಪಮುಖ್ಯಮಂತ್ರಿಗಳು): ಮಾನ್ಯ ಅಧ್ಯಕ್ಷರೆ, ಈ ವರ್ಷದ ನನ್ನ ಬಜೆಟ್ ಭಾಷಣದಲ್ಲಿ ಹೇಳಿದ್ದೇನೆ. ಮೊದಲನೆ ತಿದ್ದುಪಡಿ ಏನೆಂದರೆ, ಮದ್ಯಪಾನೀಯಗಳಿಗೆ 60 ಪರ್ಸೆಂಟ್ ಎಂದು 1-4-97ರ ಬಜೆಟ್ ಭಾಷಣದಲ್ಲಿ ಹೇಳಿದ್ದೇನೆ. ಏಕೆಂದರೆ 50 ಪರ್ಸೆಂಟ್ ಹಾಗೂ ಏಳೂವರೆ ಪರ್ಸೆಂಟ್ ಸರ್ಚಾರ್ಜ್ ಇತ್ತು. ಸರ್ಚಾರ್ಜ್ ತೆಗೆದುಹಾಕಿದ ಮೇಲೆ ಅದನ್ನು 60 ಪರ್ಸೆಂಟ್ ಎಂದು ಟ್ಯಾಕ್ಸ್ ಮಾಡಿದ್ದೇವೆ. ಅದು ತಿದ್ದುಪಡಿಯಾಗಿರಲಿಲ್ಲ. 50 ಪರ್ಸೆಂಟ್ ಎನ್ನುವುದು ಹಾಗೆ ಉಳಿದುಕೊಂಡಿತ್ತು, 60 ಪರ್ಸೆಂಟ್ ಎಂದು ಮಾಡಿದ್ದೇವೆ, ಇದನ್ನು ಬಜೆಟ್‌ನಲ್ಲಿ ಹೇಳಿದ್ದೇನೆ. ಇದಕ್ಕೆ ಸಂಬಂಧಪಟ್ಟಂತೆ. ನಂತರ ಎರಡನೇಯದು, 5ಲಕ್ಷದವರೆಗೆ ಸಣ್ಣ ವ್ಯಾಪಾರಗಾರರಿಗೆ ಕಾಂಪೋಸಿಷನ್ ಸ್ಕೀಮ್ ತೆಗೆದುಕೊಂಡು ಬಂದು, ಆ ಸ್ಕೀಮ್ ಮಾಡುವಾಗ ಇದರಲ್ಲಿ ಪರ್ಚೇಸ್ ಟ್ಯಾಕ್ಸ್ ಬಿಟ್ಟು ಹೋಗಿತ್ತು. ಇದನ್ನು ಸೇರಿಸುವ ಸಲುವಾಗಿ ಸೆಕ್ಷನ್ 6ರಲ್ಲಿ ಅಳವಡಿಸತಕ್ಕದ್ದು. ಇದು ಕೂಡ ಬಜೆಟ್‌ನಲ್ಲಿ ಹೇಳಿರುವಂತೆ ಅನುಗುಣವಾಗಿ ಮಾಡಲಾಗಿದೆ. ಮತ್ತೊಂದು ಮೂರನೇ ತಿದ್ದುಪಡಿ ಏನೆಂದರೆ, ಪಬ್ಲಿಕ್ ಅಂಡರ್ ಟೇಕಿಂಗ್, ಸ್ಟೇಟ್ ಗೌರ್ನಮೆಂಟ್ ಅಂಡರ್ ಟೇಕಿಂಗ್, ಸೆಂಟ್ರಲ್ ಗೌರ್ನಮೆಂಟ್ ಅಂಡರ್ ಟೇಕಿಂಗ್, ಕಾಂಟ್ರಾಕ್ಟ್ ಟ್ಯಾಕ್ಸ್ ಬಗ್ಗೆ ಅದರಲ್ಲಿ ಜಾಯಿಂಟ್ ಸೆಕ್ಟರ್ ಎನ್ನುವ ಪದ ಬಿಟ್ಟು ಹೋಗಿತ್ತು, ಈ ತಿದ್ದುಪಡಿಯಲ್ಲಿ ಅದನ್ನು ಸೇರಿಸಲಾಗಿದೆ. ನಂತರ ಫಾರಂ ನಂಬರ್ 39, ಇದಕ್ಕೆ ಕಾಟನ್ ಮತ್ತು ರೆಕ್ಟಿಫೈಡ್ ಸ್ಪಿರಿಟ್ ಇದರಲ್ಲಿ